ಸಂಯುಕ್ತ ಕರ್ನಾಟಕ



# ಜೈನ್ ಕಾಲೇಜಿನಲ್ಲಿ ಸಾಂಸ್ಕೃತಿಕ ವಾರ್ಷಿಕೋತ್ಸವ!



ಸಂಗೀತ! ಸಂಗೀತ!! ಸಂಗೀತ!!! ನೋಡಿದಲ್ಲೇಲ್ಲಾ ಕನ್ನಡ ಸಾಹಿತ್ಯ ಸಂಗೀತದ್ದೆ ನಾದ ನಿನಾದ. ಕನ್ನಡ ಚಲನಚಿತ್ರಗೀತೆಯಿಂದ ಹಿಡಿದು ಕನ್ನಡ ಭಾವಗೀತೆಯ ಭಾವಾಂತರಾಳದ ಇನಿ ದನಿಯುವರೆಗೆ ಕನ್ನಡ ಮಧುರ ಗೀತೆಗಳು ನೋಡುಗರ ಗಮನ ಸೆಳೆದವು.

ಇವೇಲ್ಲವೂ ಮೂಡಿಬಂದಿದ್ದು ನಗರದ ಕನಕಪುರದ ಜೈನ್ ಕಾಲೇಜಿನ ವಾರ್ಷಿಕೋತ್ಸವ ದಿನಾಚರಣೆಯಲ್ಲಿ. ಅಲ್ಲಿ ನೆರೆದಿದ್ದ ಪ್ರತಿಯೊಬ್ಬರ ಮನದಲ್ಲೂ 'ಕನ್ನಡ ದೀಪ' ಬೆಳಗಿಸಿ, ಕನ್ನಡ ಭಾಷೆಯ ಪ್ರಸರಣ ಹಾಗೂ ಕನ್ನಡತನವನ್ನು ಜಾಗೃತಗೊಳಿಸುವ ಜೊತೆ ಜೊತೆಗೆ, ಕಾಲೇಜು ಹಾಗೂ ವಿದ್ಯಾರ್ಥಿಗಳ ವಾರ್ಷಿಕ ಸಾಧನೆಗಳೆಡೆಗೆ ಬೆಳಕು ಚೆಲ್ಲುವ ಸಲುವಾಗಿ ಹಮ್ಮಿಕೊಂಡಿದ್ದ ಕಾರ್ಯಕ್ರಮ ಸಾಂಸ್ಕೃತಿಕ ಸೇತುವೆಯಾಗಿ ಮೂಡಿಬಂದದ್ದು ವಿಶೇಷವಾಗಿತ್ತು.

ವಿದ್ಯಾರ್ಥಿಗಳು ಎಲ್ಲರೂ ಅತ್ಯಂತ ಉತ್ಸಕರಾಗಿ ಪ್ರತಿಯೊಂದು ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಕನ್ನಡದ ಕಂಪನ್ನು ಸೂಸುವ ಹಾಡುಗಳಿಗೆ ಹೆಜ್ಜೆ ಹಾಕುತ್ತಿದ್ದ ಆ ಪರಿ ನಿಜಕ್ಕೂ ನೆರೆದಿದ್ದವರಿಗೆ ಹೊಸ ಅನುಭವ ನೀಡಿತು. ಅವರ ಹೆಜ್ಜೆ ತಕ್ಕ ಹಾಗೇ ಉಳಿದ ವಿದ್ಯಾರ್ಥಿಗಳು ಸಹ ಜೊತೆಯಾದರು. ಇಡೀ ಸಭಾಂಗಣ ವಿದ್ಯಾರ್ಥಿಗಳ ಚಪ್ಪಾಳೆ, ಶಿಳ್ಳೆಗಳಿಂದ ತುಂಬಿಹೋಗಿತ್ತು.

ನಗರದ ಜನರಿಂದ ಮರೆಯಾಗುತ್ತಿರವ ಕಲೆಗಳಾದ ಪೂಜಾಕುಣಿತ ಮತ್ತು ಜನಪದ ನೃತ್ಯಗಳನ್ನು ಅತ್ಯಂತ ಸುಂದರವಾಗಿ ಮಾಡಿದ ವಿದ್ಯಾರ್ಥೀಗಳು ಇಂಥಹ ವೆಸ್ಟರ್ನ್ ದಿನಗಳಲ್ಲಿಯೂ ಪಾರಂಪರಿಕವಾದ ನೃತ್ಯಗಳಿಗೆ ಒತ್ತುಕೊಟ್ಟು ಎಲ್ಲರ ಮೆಚ್ಚುಗೆ ಗಳಿಸಿದ ವಿದ್ಯಾರ್ಥಿಗಳು ಇವುಗಳ ಜೊತೆಗೆ ಭಾವಗೀತಾ ಗಾಯನ, ಸಿನೆಮಾ ಗಾಯನ ಮತ್ತು ಉಳಿದ ನೃತ್ಯ ಮಾಡಿ ಎಲ್ಲರನ್ನು ಸೆಳೆದರು.

ಕದಂಬೋತ್ಸವ, ಹಂಪಿಉತ್ಸವದಂತಹ ಐತಿಹಾಸಿಕ ಕನ್ನಡ ಉತ್ಸವಗಳನ್ನು ಕನ್ನಡಿಗರ ಮನೆಯಲ್ಲಿ ಚಿರಪರಿಚಯಿಸಿದ ವೈ ಕೆ ಮುದ್ದುಕೃಷ್ಣ, ಮುಖ್ಯ ಅತಿಥಿಯಾಗಿ ಆಗಮಿಸಿ, ವಿದ್ಯಾರ್ಥಿಗಳ ಸಾಧನೆಯನ್ನು ಪ್ರಶಂಸಿದರು.

"ನಿಮ್ಮಲ್ಲಿನ ಇಚ್ಛಾಶಕ್ತಿಯೇ ನಿಮ್ಮನ್ನು ನಿಮ್ಮ ಗುರಿಯೆಡೆಗೆ ಕರೆದೊಯ್ಯುವ ಗುರಿಕಾರ.

ನಿಮ್ಮ ಸಾಧನೆಯ ಕ್ಷೇತ್ರ ಯಾವುದೇ ಆಗಿರಲಿ, ಬದುಕಿನುದ್ದಕ್ಕೂ ನಿಮ್ಮ ಹವ್ಯಾಸವನ್ನು ಜೀವಂತವಾಗಿರಿಸಿ. ನಾಡು-ನುಡಿಯ ಬಗ್ಗೆ ಅಭಿಮಾನವಿರಲಿ, ನಾಳಿನ ಸಾಂಸ್ಕೃತಿಕ ಸೇತುವೆ ನೀವಾಗಿ" ಎಂದು ವಿದ್ಯಾರ್ಥಿಗಳಿಗೆ ಕಿವಿ ಮಾತನ್ನು ಹೇಳಿದರು.

ಡಾ. ಎನ್ ವತ್ಸಲ, ಪ್ರಾಂಶುಪಾಲರು, ಜೈನ್ ಕಾಲೇಜು, ಕನಕಪುರ, ಶ್ರೀ ಬಿ ಪಿ ಕಿಶೋರ್, ಪ್ರಾಂಶುಪಾಲರು, ಜೈನ್ ವಿದ್ಯಾನಿಕೇತನ್ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.



